ಎಲ್ಲಾ ಕಡೆ ಬಾವಿ ಮುಂತಾದ ಕಡೆ ಹೊಳಹೊಕ್ಕು ನೀರು ಹರಿಯುತ್ತಿದೆ. ಎಲ್ಲಾ ಕಡೆ ನೀರು ಬಂದಿದೆ. ಈ ಬಗ್ಗೆ ಇನ್ನು ಒಂದು ವರ್ಷ ಅಥವಾ ೬ ತಿಂಗಳ ಒಳಗೆ ತಜ್ಞರನ್ನು ಬಿಟ್ಟು ಕೆಲಸ ಮಾಡಿಸಿದರೆ ಒಳ್ಳೆಯ ಕೆಲಸ ಮಾಡಿದಂತಾಗುತ್ತದೆ. ಈ ನಿರ್ಮಾಣ ಕಾರ್ಯದಲ್ಲಿ ಕನ್‌ಸ್ಟ್ರಕ್ಷನ್ ಪ್ರೈಸ್ ಜಾಸ್ತಿ ಆಗಿದೆ. ಸರ್ಕಾರವೇ ಇದರ ಹೊಣೆ ಹೊತ್ತು ಮಾಡಿಸಬೇಕೆಂದು ನಾನು ಹೇಳಂತ್ತೇನೆ.

ಶ್ರೀ ಧರ್ಮಸಿಂಗ್ —ಈ ನಿರ್ಮಾಣ ಕಾರ್ಯ ಯಾವಾಗಲೋ ಆಗಬೇಕಾಗಿತ್ತು. ಈ ಒಂದು ಕಾರ್ಯದ ಆಗತ್ಯತೆಯನ್ನೇ ನಾವು ಗಣನೆಗೆ ತೆಗೆದುಕೊಂಡು ಬೇರೆ ಒಂದು ಲೊಕೇಷನ್ ಕೂಡಾ ಗೊತ್ತು ಪಡಿಸಿದ್ದು ಆ ಬಗ್ಗೆ ಸ್ಕೀಮ್ ತೆಗೆದುಕೊಳ್ಳಲಾಗಿದೆ. ಯಾವುದೇ ವಿಷಯದಲ್ಲಾಗಲೀ, ವಾಟರ್ ಸಪ್ಲೈ ಸ್ಕೀಮಾಗಲಿ ಇದಕ್ಕೆ ನಗರಸಭೆಯವರ ಒಪ್ಪಿಗೆಗೆ ಬಿಡಬೇಕಾಗುತ್ತದೆ. ಅವರಿಗೆ ಎಲ್.ಐ.ಸಿ.ಯಿಂದ, ಸರ್ಕಾರದಿಂದ ಹಣವನ್ನು ಕೊಡಬೇಕಾಗುತ್ತದೆ. ಅವರಿಗೆ ಕೊಡುವ ಗ್ರಾಂಟ್‌ನಲ್ಲಿ ಅದನ್ನು ಡಿಡೆಕ್ಟ್ ಮಾಡಿ ಇದಕ್ಕೆ ಅಡ್ಜೆಸ್ಟ್ ಮಾಡಿ ಮಾಡಲಾಗುತ್ತದೆ. ೨೦ ವರ್ಷದಿಂದ ಏನು ಕೆಲಸ ಆಗಿಲ್ಲ ಎಂದು ಮಾನ್ಯ ಸದಸ್ಯರು ಕಳಕಳಿಯಿಂದ ಹೇಳಿದ್ದಾರೆ ಆ ವಿಷಯವನ್ನು ನಾವು ಗಣನೆಗೆ ತೆಗೆದುಕೊಂಡಿದ್ದೇವೆ.

ಶ್ರೀ ಜಿ. ಕೆ. ತಕ್ಕೇಡ್ —೧೯೫೮ರಲ್ಲಿ ಏನು ಬಾಂಬೆ ಸರ್ಕಾರ ಇದ್ದಾಗ ಏನು ಒಂದು ಅವಾಂತರ ನಡೆದಿದೆ ಆ ಬಗ್ಗೆ ಆ ಕಾಲದಲ್ಲಿ ಯಾರು ಯಾರು ಹೊಣೆಗಾರರು ಇದ್ದಾರೆ ಅವರ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಧರ್ಮಸಿಂಗ್.—ನೋಡೋಣ, we will get the whole thing examined. ಏನಾಗಿದೆ ಎಂಬುದನ್ನು ನೋಡುತ್ತೇನೆ.

Declaration of Annewari in Hassan Taluk.

784 SRI K. H. HANUME GOWDA (Hassan).—Will the Minister for Revenue be pleased to state ;—

(a) whether the "Anevari accounts" (estimate production of crops) in Shanthi grama, Kataya and Kasaba Hoblies of Hassan Constituency has been written for the years 1978–79, 1979–80 and 1980–81 ;

(b) the name of villages and details under various Panchayats where the "Anevari accounts" is less than six annas for the last 3 years may be furnished ?

SRI MALLIKARJUNA M. KHARGE (Minister for Revenue)

(a) No "Anevari accounts" were written for the years 1978–79 and 1979–80. The "Anevari accounts" has been written in the villages of Shanthi grama Hoble for the year 1980–81 only.

(b) In all the villages of Shanthi grama Hobli, the crops yielded was less than four annas during the year 1980–81. The details of these villages are laid on the Table of the House.

ಶ್ರೀ ಕೆ. ಎಚ್. ಹನುಮೇಗೌಡ.—ಅಧ್ಯಕ್ಷರೆ, ೧೯೭೮–೭೯ನೇ ಸಾಲಿನಲ್ಲಿ ಕೂಡಾ ಅನೇಕ ಹಳ್ಳಿಗಳಲ್ಲಿ ಮಳೆ ಪೂರ್ತಿ ಬರದೇ ಬೆಳೆ ಹಾಳಾಗಿರುತ್ತದೆ. ಆ ಸಾಲಿನಲ್ಲೂ ಏಕೆ ಆಣೆವಾರಿ ಲೆಕ್ಕವನ್ನು ಬರೆಯಲಿಲ್ಲವೆಂದು ಕೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೆ, ೧೯೭೮–೭೯ರಲ್ಲಿ ನೆಸಸಿಟಿ ಇರಲಿಲ್ಲ. ಅದಕ್ಕೆ ಆ ಸಾಲಿನಲ್ಲಿ ಡೆಪ್ಯುಟಿಕಮಿಷನರ್ ಅವರು ಬರೆದಿರುವುದಿಲ್ಲ

ಶ್ರೀ ಕೆ. ಎಚ್. ಹನುಮೇಗೌಡ.—ಈ ವರ್ಷವೂ ಮಳೆ ಆಗದೆ ಬೆಳೆ ಬೆಳೆಯದೇ ಜನ ಬಹಳ ತೊಂದರೆ ಪಟ್ಟಿದ್ದಾರೆ. ಆಣೆವಾರಿ ಲೆಕ್ಕವನ್ನು ಪ್ರತಿವರ್ಷವೂ ಬರೆಯಬೇಕಂ. ಆ ವರ್ಷ ಮಳೆ ಪೂರ್ತಿ ಬರದೇ ಬೆಳೆ ಹಾಳಾಗಿದ್ದರೂ ಕೂಡಾ ಯಾಕೆ ಆಣೆವಾರಿ ಲೆಕ್ಕ ಬರೆಯಂಲಿಲ್ಲ ?

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ನಾನು ಈಗಾಗಲೇ ಹೇಳಿದಹಾಗೆ, ಡೆಪ್ಯೂಟಿ ಕಮಿಷನರ್ ಅವರಿಗೆ ಕೆಲವು ಡಿಸ್ಕ್ರಿಷನರಿ ಪವರ್ಸ್ ಇವೆ. ಎಲ್ಲೆಲ್ಲ ಬೆಳೆ ಚೆನ್ನಾಗಿ ಯಾವಾಗ ಬಂದಿಲ್ಲ ಎಂದು ಕಂಡು ಬಂದಾಗ ಎಕ್ಸ್‌ಪೆರಿಮೆಂಟಲ್ ಕ್ರಾಪ್ ಕಟಿಂಗ್ ಮಾಡಿ ಯಾವ ಏರಿಯಾದಲ್ಲಿ ಏನಾಗಿದೆ ಎಂದು ವರದಿ ಮಾಡುವುದು ಇವರಿಗೆ ಬಿಟ್ಟಿದ್ದು, ಇದನ್ನು ಬರೆಯುವುದು ನೆಸಸಿಟಿ ಇದೆ ಎಂದು ಕಂಡುಬಂದಾಗ ಮಾತ್ರ ತೆಗೆದುಕೊಳ್ಳುತ್ತಾರೆ. ಮಾನ್ಯ ಸದಸ್ಯರು ಏನು ೧೯೭೮–೭೯ನೇ ಸಾಲಿನಲ್ಲಿ ಬೆಳೆ ಆಗಿಲ್ಲ ಎಂದು ಹೇಳುತ್ತಿದ್ದಾರೆ ಅದು ಅವರ ಪರ್ಸನಲ್ ಇನ್‌ಫರ್ಮೇಷನ್ ಇರಬಹುದು. ನಮ್ಮ ಮಾಹಿತಿ ಪ್ರಕಾರ ಅಂದಿನ ದಿವಸ ಆಣೆವಾರಿ ಬರೆಯುವ ಅವಶ್ಯಕತೆ ಇರಲಿಲ್ಲ. ಆದ್ದರಿಂದ ಮಾಡಿಲ್ಲ.

ಶ್ರೀ ಕೆ. ಎಚ್. ಹನುಮೇಗೌಡ.—ಪುನಃ ೧೯೮೦–೮೧ರಲ್ಲಿ ಳ ಅಣಿಗಿಂದ ಕಮ್ಮಿ ಪಸಲು ಬಂದಿದೆ ಎಂದಿದ್ದೀರಿ. ಈ ಬಗ್ಗೆ ಸರ್ಕಾರ ಅವರಿಗೆ ಏನು ಸವಲತ್ತುಗಳನ್ನು, ಸೌಲಭ್ಯಗಳನ್ನು ಒದಗಿಸುತ್ತಿದೆ?

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ಈಗಾಗಲೇ ಸುಮಾರು ೨೪೭ ಹಳ್ಳಿಗಳಲ್ಲಿ ೬ ಆಣೆಗಿಂತಲೂ ಕಡಿಮೆ ಫಸಲು ಬಂದಿದೆಯೆಂದು ಡೆಪ್ಯೂಟೀ ಕಮಿಷನರ್‌ರವರು ೨೯–೪–೧೯೮೧ರಲ್ಲಿ ಒಂದು ನೋಟಿಫಿಕೇಷನ್ ಇಷ್ಯೂ ಮಾಡಿದ್ದಾರೆ. ಅಲ್ಲಿ ಏನು ಬರಗಾಲ ಕಾಮಗಾರಿ ಹಾಗೂ ಸ್ಕೇರ್‌ಸಿಟಿ ರಿಲೀಫ್ ಕೆಳಗೆ ಏನು ಸಹಾಯ ಮಾಡಬಹುದೆಂಬುದನ್ನು ಪರಿಶೀಲಿಸಿ ಅದನ್ನು ಕೈಗೊಳ್ಳಲಾಗುವುದು.

ಶ್ರೀ ಕೆ. ಎಚ್. ಹನುಮೇಗೌಡ.—ಈ ಭಾಗದಲ್ಲಿ ಕ್ಷಾಮ ತಲೆದೋರಿದೆಯೆಂದು ಸರ್ಕಾರ ಒಪ್ಪಿ ಕೊಂಡಾಗಾಯಿತು. ಈ ಭಾಗಗಳಲ್ಲಿ ಸಾಲವನ್ನು ಖಡ್ಡಾಯವಾಗಿ ವಸೂಲು ಮಾಡುತ್ತಿದ್ದಾರೆ. ಈ ಬಗ್ಗೆ ಹೇಳಬೇಕು ಎರಡನೆಯದಾಗಿ, ಕಂದಾಯವನ್ನು ಮಾಫೀ ಮಾಡುತ್ತೀರಾ ? ಈ ಬಗ್ಗೆ ನೋಟಿಫಿಕೇಷನ್ ಇಷ್ಯೂ ಆಗಿದೆಯೇ ?

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ನೋಟಿಫಿಕೇಷನ್ ಹೊರಡಿಸಿ ನಾವು ಈಗಾಗಲೇ ರೆವಿನ್ಯೂ ಸಸ್ಪೆಂಡ್ ಮಾಡಿದ್ದೇವೆ. ಅಲ್ಲಿ ರೆವಿನ್ಯೂ ಕಲೆಕ್ಟ್ ಮಾಡುತ್ತಿಲ್ಲ. ಕಲೆಕ್ಟ್ ಮಾಡುತ್ತಿರುವ ನಿದರ್ಶನಗಳ ಇದ್ದರೆ ಅದನ್ನು ಪರಿಶೀಲಿಸಂತ್ತೇವೆ.

ಶ್ರೀ ಕೆ. ಎಚ್. ಹನುಮೇಗೌಡ.—ಪ್ರತಿವರ್ಷವೂ ಆಣೆವಾರಿಯನ್ನು ಬರೆಯದಿದ್ದರೆ ಜನರಿಗೆ ಈ ಬಗ್ಗೆ ಗೊತ್ತಾಗುವುದಿಲ್ಲ. ಮಾನ್ಯ ಮಂತ್ರಿಗಳು ಅವಶ್ಯವಿದಾಗ ಮಾತ್ರ ಆಣೆವಾರಿಯೆನ್ನು ಬರೆಯ ಲಾಗುತ್ತದೆಯೆಂದಿದ್ದಾರೆ. ಪ್ರತಿವರ್ಷವೂ ಇದನ್ನು ಬರೆಯುವುದು ಸೂಕ್ತವೆಂದು ನಾನು ಹೇಳುತ್ತೇನೆ.

MR. SPEAKER.—It may not be correct to say that it is the discretion any power of the Deputy Commissioner. Every year he has to write. ಎಷ್ಟು ಆಣೆ ಬೆಳೆಯಾಗಿದೆ ಎಂದು ಬರೆಯಬೇಕಾಗುತ್ತದೆ. I do not think it is discretionary.

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ಸೆಕ್ಷನ್ ೧೪೭ರ ಪ್ರಕಾರ ಇವರು ೧೯೭೮–೭೯ ರಿಂದ ಆಣೆವಾರಿ ಲೆಕ್ಕವನ್ನು ಬರೆಯಲಾಗಿದೆಯೇ ಎಂದು ಕೇಳಿದ್ದಾರೆ, ೧೯೮೦–೮೧ರಲ್ಲಿ ಆಣೆವಾರಿ ಮಾಡಿದ ಮಾಹಿತಿ ಇದೆ. ಆ ರೀತಿಯಾಗಿ ನಾವು ಕ್ರಮ ಕೈಗೊಂಡಿದ್ದೇವೆ.

ಶ್ರೀ ಕೆ. ಎಚ್. ಹನುಮೇಗೌಡ.—ಪ್ರತಿ ವರ್ಷ ಆಣೆವಾರಿ ಲೆಕ್ಕ ಬರೆಯುವುದಕ್ಕೆ ಏನು ತೊಂದರೆ ಇದೆ? ಸಂಬಂಧಪಟ್ಟ ಅಧಿಕಾರಿಗಳು ಇರುತ್ತಾರೆ, ಎಲ್ಲಾ ವ್ಯವಸ್ಥೆ ಇರುತ್ತದೆ. ಇಡೀ ತಾಲ್ಲೂಕಿನಲ್ಲಿ ಎಲ್ಲ ವನ್ನೂ ನೋಡುವುದಕ್ಕೆ ಹೋಗುವುದಿಲ್ಲ. ಬರಗಾಲ ಇರತಕ್ಕ ಕಡೆ ಪ್ರತಿ ವರ್ಷವೂ ಆಣೆವಾರಿ ಬರೆಯುವುದನ್ನು ಕಡ್ಡಾಯ ಮಾಡುತ್ತೀರಾ ?

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—೧೯೮೦–೮೧ರಲ್ಲಿ ಆಣೆವಾರಿ ಲೆಕ್ಕವನ್ನು ಬರೆಯಲಾಗಿದೆ. ಆ ಬಗ್ಗೆ ನೋಟಿಫಿಕೇಷನ್ ಇಷ್ಯೂ ಮಾಡಿ ಕೆಲವು ಕಾರ್ಯಕ್ರಮ ಕೈಗೊಳ್ಳಲಾಗಿದೆ. ಆದರೆ ಹಿಂದಿನ ವರ್ಷಗಳಲ್ಲಿ ಏಕೆ ಆಣೆವಾರಿ ಬರೆದಿಲ್ಲ ಎಂದು ಕೇಳಿದ್ದಾನೆ. ಆಗ ೬ ಆಣೆಗೂ ಕಡಿಮೆ ಇರಲಿಲ್ಲ. ಆದುದರಿಂದ ತಾವು ಕೇಳಿದ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಆಗಿಲ್ಲ.

ಶ್ರೀ ಕೆ. ಎಚ್. ಹನುಮೇಗೌಡ.—ಇದನ್ನು ಪ್ರತಿವರ್ಷವೂ ಖಡ್ಡಾಯವಾಗಿ ಬರೆಯುವಹಾಗೆ ಕ್ರಮಕೈಗೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ಲ್ಯಾಂಡ್ ರೆವಿನ್ಯೂ ಆಕ್ಟ್ ಪ್ರಕಾರ ಅವರು ಮಾಡೇ ಮಾಡುತ್ತಾರೆ. ಎಲ್ಲಿ ಅದನ್ನು ಮಾಡಿಲ್ಲ, ತೊಂದರೆ ಇದೆ ಎಂದು ಹೇಳಿದರೆ ಆ ಬಗ್ಗೆ ಮಾಡಿಸಿಕೊಡುತ್ತೇವೆ.

Supply of Logs to the Bharat Gold Mines Ltd., Kolar.

434 SRI C. M. ARUMUGAM (K. G. F.).—Will the Minister for Forest, Mines and Geology be pleased to state :—

(a) Whether it is a fact that the Forest Department supplied logs to the Bharat Gold Mines Limited, Kolar Gold Fields;

(b) if so, since when they are supplying and the rate and terms and conditions for such supply ;

(c) whether it is a fact that the required logs to the Bharat Gold Mines Limited are being supplied through agents ;

(d) if so, the names and addresses of such agents (Details may please be furnished) ;

(e) whether it is a fact that there is a mis-use in the supply of logs to the Bharat Gold Mines Limited ;

(f) if so, the action taken thereof ?

SRI G. MADE GOWDA (Minister for Forest, Mines and Geology).—

(a) Yes.

(b) Since 1978-79 Forest Department is supplying logs at the Depot sanctioned schedule of rates plus all statutory charges.

(c) The allotment is direct to the Company and not through any agents.

(d) Does not arise in view of reply to clause (c).

(e) No. The Department has neither come across such misuse nor received any complaint to that effect.

(f) Does not arise in view of reply to clause (e).

SRI C.M. ARUMUGHAM .— Sir, the other day the hon. Minister was saying that he has received a note from the C.O.D. May I know what is that note? I would like to know whether the C.O.D. was asked to investigate this case or whether there was any complaint from the Forest Department or whether the was any complaint from the Management of the Bharat Gold Mines Ltd.